ಹಿಂದುಳಿದ ಗಡಿ ಪ್ರದೇಶಗಳಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್‌ಗಳನ್ನು ತೆರೆಯುವುದು

159 (859) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಜಿಲ್ಲೆಯು ಸೇರಿದಂತೆ ರಾಜ್ಯಾದ್ಯಂತ ಸರ್ಕಾರದ ವತಿಯಿಂದ ಇಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭ ಮಾಡುವ ಪರಿಶೀಲನೆ ಇದೆಯೇ ;

(ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭ ಮಾಡಲಾಗುವುದು ;

(ಇ) ಚಾಮರಾಜನಗರ ಜಿಲ್ಲೆಯಲ್ಲಿ ಎಲ್ಲೆಲ್ಲಿ ಕಾಲೇಜನ್ನು ತೆರೆಯಲಾಗುವುದು?

ಶ್ರೀ ಡಿ.ಹೆಚ್. ಶಂಕರಮೂರ್ತಿ (ಮಾನ್ಯ ಉನ್ನತ ಸಚಿವರು):

(ಅ) ಇಲ್ಲ.

(ಆ) ಉದ್ಭವಿಸುವುದಿಲ್ಲ.

(ಇ) ಉದ್ಭವಿಸುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಇಲ್ಲಿ ಉತ್ತರಗಳು ಎಂದರೆ ಒಂದೇ ಒಂದು ಬಂದಿರುವುದು. "ಗಳು" ಇಲ್ಲ. ಇಲ್ಲ, 'ಉದ್ಭವಿಸುವುದಿಲ್ಲ, ಉದ್ಭವಿಸುವುದಿಲ್ಲ' ಎಂದಿದೆ. ನನ್ನ ಕ್ಷೇತ್ರ ಯಾವುದೆಂದರೆ ಚಾಮರಾಜನಗರ ಕ್ಷೇತ್ರ. ಏಕೆ ಉದ್ಭವಿಸುವುದಿಲ್ಲ? ತಾವು ಹೇಳಬೇಕು. ಅದು ಗಡಿನಾಡು, ಹಿಂದುಳಿದ ಗಡಿ ಪ್ರದೇಶ ಈ ಚಾಮರಾಜನಗರ. ಉದ್ಭವಿಸುವುದಿಲ್ಲವೆಂದರೆ ಏನು? ಉದ್ಭವ ಏಕೆ ಆಗುವುದಿಲ್ಲ? ನಿಮ್ಮಲ್ಲಿ ಇಚ್ಛಾಶಕ್ತಿ ಏಕಿಲ್ಲ?. ಅದು ಹಿಂದುಳಿದ ಗಡಿ ಪ್ರದೇಶ, ಗಡಿ ಬಗ್ಗೆ ಉದ್ದುದ್ದವಾಗಿ ಭಾಷಣ ಮಾಡುತ್ತೀರಿ. ಗಡಿ ಅಭಿವೃದ್ಧಿ ಮಾಡುತ್ತೇವೆಂದು ಹೇಳುತ್ತೀರಿ. ಸರ್ಕಾರ ಏಕೆ ಅಲ್ಲಿಗೆ ಒಂದು ಎಂಜಿನಿಯರಿಂಗ್ ಕಾಲೇಜನ್ನು ಕೊಡುವುದಿಲ್ಲ? ಮೆಡಿಕಲ್ ಕಾಲೇಜನ್ನು ಏಕೆ ಕೊಡುವುದಿಲ್ಲ? ಸ್ಪಷ್ಟವಾಗಿ ಹೇಳಿ? ಇದನ್ನು ನೀವು ಕೆಲವರಿಗೆ ಮಾತ್ರ ಹಂಚಿಕೊಳ್ಳುತ್ತಿದ್ದೀರಿ. ಇಂತಹ ಪ್ರದೇಶಗಳಿಗೆ ಏಕೆ ಕೊಡುವುದಿಲ್ಲವೆಂದು ನೇರವಾಗಿ ಹಾಗೂ ಪ್ರಾಮಾಣಿಕವಾಗಿ ಹೇಳಿ.

ಶ್ರೀ ಡಿ.ಹೆಚ್. ಶಂಕರಮೂರ್ತಿ: ಮಾನ್ಯ ಅಧ್ಯಕ್ಷರೆ, ಹಿರಿಯರಾದಂತಹ ಮಾನ್ಯ ವಾಟಾಳ್ ನಾಗರಾಜ್ ಅವರು ಕೇಳಿದಂತಹ ವಿಚಾರದಲ್ಲಿ ಹೇಳುವುದಾದರೆ ಸರ್ಕಾರದಲ್ಲಿ ಇತ್ತೀಚೆಗೆ ಯಾವುದೇ ಎಂಜಿನಿಯರಿಂಗ್ ಕಾಲೇಜು ಪ್ರಾರಂಭ ಆಗಲಿಲ್ಲ. ಪ್ರಾರಂಭ ಖಂಡಿತ ಮಾಡಬೇಕು, ಮಾಡಲೇಬೇಕು. ಆದರೆ ಇರತಕ್ಕಂಥ ವ್ಯವಸ್ಥೆಯಲ್ಲಿ ಪದವಿ ಕಾಲೇಜಿನ ಕಡೆ ನಮ್ಮ ಗಮನವನ್ನು ಈ ವರ್ಷ ಕೊಟ್ಟಿದ್ದೇವೆ. ಕಳೆದ ಹಲವಾರು ವರ್ಷಗಳಿಂದ ಪದವಿ ಕಾಲೇಜು ಇಲ್ಲ, ಎಂಜಿನಿಯರಿಂಗ್ ಕಾಲೇಜು ಇಲ್ಲ ಯಾವ ಕಾಲೇಜು ಇಲ್ಲ. ಆದರೆ ಹಿಂದಿನ ಸರ್ಕಾರದವರು ಮೆಡಿಕಲ್ ಕಾಲೇಜಗಳನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಿದರು. ಅದನ್ನು ನಾವು ಮುಂದಕ್ಕೆ ತೆಗೆದುಕೊಂಡು ಹೋಗುವಂತಹ ಪ್ರಯತ್ನ ಮಾಡುತ್ತಾ

ಚಾಲ್ತಿಯಲ್ಲಿಟ್ಟಿದ್ದೇವೆ. ಆದರೆ ಎಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭ ಮಾಡುವಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ. ಪ್ರಸ್ತಾವನೆ ಬಂದರೆ ಪ್ರಾಮಾಣಿಕವಾಗಿ ನಂಜುಂಡಪ್ಪ ವರದಿ ಆಧಾರವಾಗುತ್ತದೆ. ಅತೀ ಹಿಂದುಳಿದ ಜಿಲ್ಲೆಗಳಲ್ಲಿ ಚಾಮರಾಜನಗರ ಒಂದು ಎನ್ನುವುದು ನಮ್ಮ ಗಮನದಲ್ಲಿ ಇದೆ. ಬಹಳ ಸೀರಿಯಸ್ ಆಗಿ ಅದನ್ನು ಕನ್ಸಿಡರ್ ಮಾಡುತ್ತೇವೆ. As of now ನಮ್ಮ ಮುಂದೆ ಯಾವುದೇ ಪ್ರಸ್ತಾವನೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ನಮ್ಮ ಕ್ಷೇತ್ರಕ್ಕೆ ಮಾನ್ಯ ಮುಖ್ಯಮಂತ್ರಿಗಳು ಬರುವುದಿಲ್ಲ. ನನಗೆ ಇದು ಬಹಳ ನೋವಾಗಿದೆ. ಇಲ್ಲವೆಂದರೆ ಚಾಮರಾಜನಗರವನ್ನು ಒಂದು ರಾಜ್ಯವನ್ನಾಗಿ ಮಾಡಿ ಬಿಡಿ. 27 ಜಿಲ್ಲೆಯಲ್ಲಿ ನಮ್ಮದೆ ಒಂದು ರಾಜ್ಯ ಮಾಡಿಬಿಡಿ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ನಿಮ್ಮದು ಒಂದು ರಾಜ್ಯ ಮಾಡಿ ಒಬ್ಬರು ಮುಖ್ಯಮಂತ್ರಿಯನ್ನಾಗಿ ಮಾಡಿಬಿಟ್ಟರೆ ಮುಗಿದೇ ಹೋಯಿತು.

ಶ್ರೀ ವಾಟಾಳ್ ನಾಗರಾಜ್: ಬೇಡ ನಮಗೆ ಯಾರೂ ಬೇಡ. ನೀವ್ಯಾರು ಬರುವುದು ಬೇಡ. ಮುಖ್ಯಮಂತ್ರಿಗಳು ಯಾರೂ ಬರುವುದು ಬೇಡ. ಈ ಸದನದ ಮೂಲಕ ನಾನು ಹೇಳುವುದೇನೆಂದರೆ ನಾನು ಯಾವಾಗಲೂ ಕರ್ನಾಟಕವನ್ನು ಒಡೆಯುವುದಕ್ಕೆ ಎಂದೂ ಒಪ್ಪುವುದಿಲ್ಲ. ಆದರೂ ವಿಧಿ ಇಲ್ಲದೆ, ಚಾಮರಾಜನಗರ ಗಡಿ ಪ್ರದೇಶವನ್ನು ಒಂದು ರಾಜ್ಯವನ್ನಾಗಿ ನಿರ್ಮಾಣ ಮಾಡುವುದಕ್ಕೆ ತಾವು ಒಂದು ತೀರ್ಮಾನ ಮಾಡಿ. ಇಲ್ಲಿ ನಿರ್ಣಯವನ್ನು ಮಾಡೋಣ. ಮುಖ್ಯಮಂತ್ರಿ ಬರುವುದಿಲ್ಲವೆ? ಹೇಳಿ ಏಕೆ ಬರುವುದಿಲ್ಲ. ಕಾರಣವೇನು? ಅಲ್ಲಿಗೆ ಎಂಜಿನಿಯರಿಂಗ್ ಕಾಲೇಜು ಕೊಡುವುದಿಲ್ಲ. ಮೆಡಿಕಲ್ ಕಾಲೇಜು ಕೊಡುವುದಿಲ್ಲ, ರಸ್ತೆಗಳನ್ನು ಕೊಡುವುದಿಲ್ಲ, ನೀರು ಕೊಡುವುದಿಲ್ಲ ಎಲ್ಲಿಗೆ ಹೋಗಬೇಕು ನಾವು? ತಾವು ಹೇಳಿ. ಇಲ್ಲವೆಂದರೆ ಮುಖ್ಯಮಂತ್ರಿಗಳಾದರೂ ಅಲ್ಲಿಗೆ ಬನ್ನಿ, ಸಂತೋಷ. ನೀವು ಬರುವುದೇ ಇಲ್ಲ. ಏನಿದು ಉದ್ದೇಶ? ಆದ್ದರಿಂದ ಮುಖ್ಯಮಂತ್ರಿಗಳನ್ನು ಕರೆದುಕೊಂಡು ಬರತಕ್ಕಂಥ ಜವಾಬ್ದಾರಿಯನ್ನು ನೀವು ವಹಿಸಿಕೊಳ್ಳುತ್ತೀರಾ? ಎರಡನೆಯದಾಗಿ, ಅದು ಆಗುವುದಿಲ್ಲವೆಂದರೆ ಕೂಡಲೆ ಒಂದು ವಾರದೊಳಗಾಗಿ ವಿಶೇಷವಾದ ತೀರ್ಮಾನವನ್ನು ತೆಗೆದುಕೊಂಡು ಚಾಮರಾಜನಗರಕ್ಕೆ ಒಂದು ಎಂಜಿನಿಯರಿಂಗ್ ಕಾಲೇಜು ಕೊಡುತ್ತೀರಾ?

ಅಧ್ಯಕ್ಷರು: ಎರಡೂ ಆಗುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಿರ್ಣಯ ಮಾಡಿದಾಗ ಇದಕ್ಕೆ ನಾವು ಬೇಡ ಎಂದದ್ದು. ನಿರ್ಣಯ ಮಾಡಿದ ಮೇಲೆ ಇದು ರಾಜ್ಯಕ್ಕೆ ಹೋಗಿ ನಿಲ್ಲುತ್ತದೆ ಬೇಡಿಕೆ ಎಂದು, ಆವತ್ತು ನಮ್ಮ ಮಾತನ್ನು ಜೆ.ಹೆಚ್. ಪಟೇಲರು ಕೇಳಲಿಲ್ಲ.

ಅಧ್ಯಕ್ಷರು: ಆ ಪ್ರಶ್ನೆಗಳಿಗೆ ಉತ್ತರವನ್ನು ಮಾನ್ಯ ಶಂಕರಮೂರ್ತಿಯವರು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಮುಂದಿನ ಪ್ರಶ್ನೆಗೆ ಹೋಗೋಣ. ನೀವು ಪ್ರಶ್ನೆಗಳನ್ನು ಯಾವ್ಯಾವುದೋ ರೀತಿಯಲ್ಲಿ ಕೇಳಿದರೆ ಅವರು ಏನು ಹೇಳುತ್ತಾರೆ?

ಶ್ರೀ ವಾಟಾಳ್ ನಾಗರಾಜ್: ಈ ಅನ್ಯಾಯವನ್ನು ರಾಜ್ಯದ ಜನತೆಗೆ ತಿಳಿಸುವುದಕ್ಕಾದರೂ ಪ್ರಶ್ನೋತ್ತರ ಕಾಲದವರೆಗೆ ನಾನು ಧರಣಿ ಮಾಡುತ್ತೇನೆ.

ಅಧ್ಯಕ್ಷರು: ಅದೇನಾದರೂ ಮಾಡಿ, ಅವರು ಉತ್ತರ ಎಲ್ಲಿ ಕೊಡುತ್ತಾರೆ? ಅವರ ಕೈಯಲ್ಲಿ ಮುಖ್ಯಮಂತ್ರಿಗಳನ್ನು ಕರೆದುಕೊಂಡು ಬರುವುದಕ್ಕೆ ಆಗುತ್ತದಾ? ಈಗ ಎಸ್.ಎಸ್. ಪಾಟೀಲ್‌ರವರು ಕೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ನಡೆಯತಕ್ಕಂಥ ಸಂದರ್ಭದಲ್ಲಿ ಧರಣಿ ಮಾಡುವುದು, ಬಹಿಷ್ಕಾರ ಮಾಡುವುದು ಸರಿಯಲ್ಲ.

ಅಧ್ಯಕ್ಷರು: ಶ್ರೀ ಎಸ್.ಎಸ್. ಪಾಟೀಲ್‌ರು.....

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಧರಣಿ ಮಾಡಲು ಭಾವಿಗೆ ಬಂದು ನಿಂತರು)

ಅಧ್ಯಕ್ಷರು: ಧರಣಿ ಮಾಡುವುದು ಸರಿಯಲ್ಲವೆಂದು ಎಲ್ಲಾ ಹೇಳುತ್ತಿದ್ದಾರೆ. ಆದುದರಿಂದ ಮಾನ್ಯ ವಾಟಾಳ್ ನಾಗರಾಜ್‌ರವರು ತಮ್ಮ ಆಸನಕ್ಕೆ ಹೋಗಬೇಕು. ಎಲ್ಲರೂ ನಿಮ್ಮ ಸ್ನೇಹಿತರುಗಳಾದಿಯಾಗಿ ಈ ಕ್ರಮ ಸರಿಯಲ್ಲವೆಂದು ಹೇಳುತ್ತಿರುವುದರಿಂದ ದಯಮಾಡಿ ಹೋಗಿಬಿಡಿ. ಆಯಿತು ನಿಮ್ಮ ಪ್ರತಿಭಟನೆ ವ್ಯಕ್ತ ಮಾಡಿದ್ದೀರಿ.

(ಗೊಂದಲ)

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಈಗಿನ ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೋ ಇಲ್ಲವೋ ಆಶ್ವಾಸನೆ ಕೊಡುವುದಕ್ಕೆ. ಆದರೆ ಚಾಮರಾಜನಗರಕ್ಕೆ ಯಾರೂ ಹೋಗುವುದಿಲ್ಲವೆನ್ನುವ ಒಂದು ಭಾವನೆ ಇದೆ. ನಾನು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯಾಗಿದ್ದಾಗ ಅವರ ಜೊತೆಯಲ್ಲಿ ಹೋಗಿದ್ದೆ. ಅಲ್ಲಿಗೆ ಹೋಗಿ ಬಂದ ಮೇಲೆ ಮುಖ್ಯಮಂತ್ರಿಯಾಗಿದ್ದೇನೆ. ಮತ್ತೆ ಮುಖ್ಯಮಂತ್ರಿಯಾದ ಮೇಲೆ ಬರಬೇಕು ಎಂದರು. ನನಗೆ ಏಕೋ ಅನುಮಾನವಾಯಿತು ನಾನು ಹೋಗಲೇ ಇಲ್ಲ. ಮಾನ್ಯ ಜೆ.ಹೆಚ್. ಪಟೇಲ್‌ರವರು ನಾನು ತಿಳಿದಮಟ್ಟಿಗೆ ಈ ರಾಜ್ಯದಲ್ಲಿ ಒಂದು ರೀತಿಯಲ್ಲಿ radical. ಬಹಳಷ್ಟು ಕೂಡ ಪ್ರಗತಿಪರ ವಿಚಾರಧಾರೆಯ ಮನುಷ್ಯ. ಅವರೂ ಕೂಡ ಹೋಗಲಿಲ್ಲ. ಇವರ ಜೊತೆಯಲ್ಲಿ ಮಹದೇಶ್ವರ ಬೆಟ್ಟ ಇದೆ. ಆದರೆ ಒಂದು ಮಾತು ಏನೆಂದರೆ ಹಿಂದುಳಿದ ಪ್ರದೇಶಕ್ಕೆ ಎಂಜಿನಿಯರಿಂಗ್ ಕಾಲೇಜು ಕೊಡಬೇಕು ಎನ್ನುವಂತಹ ವಿಚಾರದಲ್ಲಿ ಹೇಳುವುದಾದರೆ ಚಾಮರಾಜನಗರ ಕೂಡ ಗಡಿ ಭಾಗದಲ್ಲಿರುವಂತ ಪ್ರದೇಶ. ಇವತ್ತು ಮೇಲಿಂದ ಮೇಲೆ ಮಾನ್ಯ ಆಚಾರ್‌ರವರು ಹೇಳುತ್ತಾರೆ, ಹೋದ ಸಲ ಮೆಡಿಕಲ್ ಕಾಲೇಜನ್ನು ಬೀದರ್ ಹಾಗೂ ಬೆಳಗಾಂನಲ್ಲಿ ಏಕೆ ಮಾಡಿದೆವು? ಗಡಿ ಭಾಗದಲ್ಲಿ ಇರುವಂತಹ ಜನರಿಗೆ ಸಹಾಯ ಮಾಡಬೇಕು

ಅಂತ. ಅದೇ ರೀತಿಯಾಗಿ ಇಂಜಿನಿಯರಿಂಗ್ ಕಾಲೇಜನ್ನು ಕೊಡಬೇಕೆಂದು ಮಾನ್ಯ ವಾಟಾಳ್ ನಾಗರಾಜ್‌ರವರು ಕೇಳುತ್ತಿದ್ದಾರೆ. ಅವರ ಸಲಹೆ ಬಹಳ ಸೂಕ್ತವಾದುದು. ಆ ಜಿಲ್ಲೆಗೆ, ಹಿಂದುಳಿದ ಪ್ರದೇಶಕ್ಕೆ ಕೊಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಧರ್ಮಸಿಂಗ್‌ರವರು ಚಾಮರಾಜನಗರಕ್ಕೆ ಹೋದಾಗ ಇದ್ದರೂ ಕೂಡ ಮುಖ್ಯಮಂತ್ರಿ ಪದವಿಯನ್ನು ಕಳೆದುಕೊಂಡು ಬಿಟ್ಟರು.

ಅಧ್ಯಕ್ಷರು: ಆಯಿತು, ಈಗ ಎಸ್.ಎಸ್. ಪಾಟೀಲ್.....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ವಾಟಾಳ್‌ರವರನ್ನು ಕಳುಹಿಸಿ ಸಾರ್ ದಯವಿಟ್ಟು ಬನ್ನಿ ಸಾರ್ ದಯವಿಟ್ಟು.

ಅಧ್ಯಕ್ಷರು: ಆಯಿತು ಅವರಿಗೆ ರಿಕ್ವೆಸ್ಟ್ ಮಾಡಿದ್ದೇನೆ, ಎಲ್ಲರೂ ಕೂಡ ನಿಮ್ಮ ಧರಣಿ ಸರಿಯಿಲ್ಲವೆಂದು ವಿನಂತಿ ಮಾಡುತ್ತಿರುವುದರಿಂದ ದಯಮಾಡಿ...

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಇವತ್ತು ನಾವೆಲ್ಲಾ ವಿನಂತಿ ಮಾಡುತ್ತಿದ್ದೇವೆ. ದಯಮಾಡಿ ವಾಪಸ್ಸು ಬಂದುಬಿಡಿ.

ಶ್ರೀ ಎಸ್.ಎಸ್. ಪಾಟೀಲ್: ನಾನು ನಿಮ್ಮ ಪರವಾಗಿ ಇದ್ದೇನೆ, ಇಬ್ಬರು ಒಂದೇ ನಾವು.

ಶ್ರೀ ಬಿ. ನಾಗರಾಜ ಶೆಟ್ಟಿ: ಮಾನ್ಯ ಅಧ್ಯಕ್ಷರೆ, ಚಾಮರಾಜನಗರಕ್ಕೆ ನಾನು ಕಳೆದ ವಾರ ಹೋಗಿದ್ದೆ.

ಅಧ್ಯಕ್ಷರು: ನೋಡಿ ದೇವರ ಮಂತ್ರಿಗಳು ಬಂದ ಮೇಲೆ ದೇವರೇ ಸಾಕ್ಷತ್ ಬಂದ ಹಾಗೆ ಆಯಿತು.

ಶ್ರೀ ಬಿ. ನಾಗರಾಜ ಶೆಟ್ಟಿ: ಮಾನ್ಯ ಅಧ್ಯಕ್ಷರೆ, ಈ ಸರ್ಕಾರ ಸ್ಪಂದಿಸುತ್ತಿದೆ. ಅಲ್ಲಿ ನೀರಿನ ಅವ್ಯವಸ್ಥೆ ಇದ್ದುದ್ದಕ್ಕೆ 11 ಕೋಟಿ ರೂಪಾಯಿಯ ಒಂದು ಪ್ರಾಜೆಕ್ಟ್ ಆಗಿದ್ದು....

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಮಾನ್ಯ ನಾಗರಾಜ್ ಶೆಟ್ಟಿಯವರು ಹೋಗಿ ಬಂದಿದ್ದಾರೆ, ನೋಡೋಣ 15 ದಿವಸದಲ್ಲಿ ಏನಾಗುತ್ತದೆ ಎಂದು.

ಶ್ರೀ ಕೆ.ಎಸ್. ಈಶ್ವರಪ್ಪ: ನಾಗರಾಜ್‌ರವರೇ, ನೀವು ಈಗ ಪ್ರತಿಭಟನೆ ಮಾಡಿ, ಸಭಾತ್ಯಾಗ ಮಾಡಬೇಕು. ಈಗ ಮಾನ್ಯ ಧರ್ಮಸಿಂಗ್‌ರವರು ಹೇಳಿದಂತಹ ಸುದೀರ್ಘವಾದ ಹೇಳಿಕೆಗೆ ನೀವು ಈಗ ಧರಣಿ ಮಾಡಬೇಕು.

ಶ್ರೀ ಬಿ. ನಾಗರಾಜ್ ಶೆಟ್ಟಿ: ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಅಧಿಕಾರಿಗಳನ್ನು ಹಾಗೂ ಶಾಸಕರನ್ನು ಮೀಟಿಂಗ್‌ಗೆ ಕರೆದಿದ್ದೇನೆ. ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರಿನ ಬಗ್ಗೆ ಮತ್ತು ರಸ್ತೆಯ ಬಗ್ಗೆ ವ್ಯವಸ್ಥೆ ಮಾಡಲು ಒಂದು ಮೀಟಿಂಗ್ ಕೂಡ ಕರೆದಿದ್ದೇನೆ. ಅದಕ್ಕೆ ಸನ್ಮಾನ್ಯ ವಾಟಾಳ್ ನಾಗರಾಜ್‌ರವರನ್ನೂ ಕರೆಯುತ್ತೇನೆ.

ಅಧ್ಯಕ್ಷರು: ಆಯಿತು, ದಯಮಾಡಿ ತಾವು ತಮ್ಮ ಸ್ಥಾನಕ್ಕೆ ಹೋಗಿ. ಈಗ ಮಾನ್ಯ ಪಾಟೀಲ್‌ರು ಕೇಳಿ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ತಮ್ಮ ಸ್ಥಾನಕ್ಕೆ ತೆರಳಿದರು)

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಉನ್ನತ ಶಿಕ್ಷಣ ಸಚಿವರನ್ನು 574ನೇ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಅಲ್ಲ ಮಾನ್ಯ ಮುಖ್ಯಮಂತ್ರಿಗಳು ಇರಲಿ, ತಾವಾದರೂ ಬರಬೇಡವೆ?

ಅಧ್ಯಕ್ಷರು: ಇರಲಿ, ಇರಲಿ. ಪಾಟೀಲರು ನಿಂತುಬಿಟ್ಟಿದ್ದಾರೆ, ಅವರು ಯೀಲ್ಡ್ ಆಗಿಲ್ಲ.

ಶ್ರೀ ವಾಟಾಳ್ ನಾಗರಾಜ್: ತಾವು ಬರಲಿಲ್ಲ, ನೀವು ಬರುತ್ತೀರಿ ಎಂದು ಹೇಳಿದ್ದೀರಿ ತಾನೆ? ಹಾರ ತುರಾಯ ಇಟ್ಟುಕೊಂಡಿದ್ದೇವು, ತಾವು ಬರಲಿಲ್ಲ. ಏನಿದು ಪರಿಸ್ಥಿತಿ?

ಅಧ್ಯಕ್ಷರು: ಆಯಿತು, ನಮ್ಮದೇನಿದೆ? ಎಸ್.ಎಸ್. ಪಾಟೀಲ್ ಕೇಳಿ.

ಗದಗ ಜಿಲ್ಲೆ ಮುಂಡರಗಿಯಲ್ಲಿ ಸರ್ಕಾರದ ಪದವಿ ಕಾಲೇಜು ಪ್ರಾರಂಭಿಸುವ ಬಗ್ಗೆ

160 (574) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ): ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

(ಅ) ಗದಗ ಜಿಲ್ಲೆ ಮುಂಡರಗಿಯಲ್ಲಿ ಸರ್ಕಾರಿ ಪದವಿ ಕಾಲೇಜು ಎಂದಿನಿಂದ ಪ್ರಾರಂಭವಾಗಿದೆ ;

(ಆ) ಈ ಕಾಲೇಜಿನಲ್ಲಿ ಬೋಧಕ ಹಾಗೂ ಬೋಧಕೇತರ ಹುದ್ದೆಗಳು ಖಾಲಿ ಇರುವ ವಿವರ ನೀಡುವುದು ;

(ಇ) ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಡಿ.ಹೆಚ್. ಶಂಕರಮೂರ್ತಿ (ಮಾನ್ಯ ಉನ್ನತ ಶಿಕ್ಷಣ ಸಚಿವರು):

(ಅ) ದಿನಾಂಕ: 06-09-2003ರಂದು ಮುಂಡರಗಿಯಲ್ಲಿ ಸರ್ಕಾರಿ ಪದವಿ ಕಾಲೇಜು ಪ್ರಾರಂಭವಾಗಿದೆ.

(ಆ) ಸರ್ಕಾರಿ ಆದೇಶ ಸಂಖ್ಯೆ: ಇಡಿ 55 ಯುಎನ್‌ಇ 2003 ದಿನಾಂಕ: 6-9-2003ರನ್ವಯ ಬಿ.ಎ., ಬಿ.ಕಾಂ ತರಗತಿಗಳನ್ನು ಪ್ರಾರಂಭಿಸಲಾಗಿದೆ. ಆ ಪ್ರಕಾರ

1) ಗ್ರೇಡ್-1 ಪ್ರಾಂಶುಪಾಲರ ಒಂದು ಹುದ್ದೆ
2) ಉಪನ್ಯಾಸಕರುಗಳ ತಲಾ ಒಂದೊಂದು ಹುದ್ದೆಗಳು
3) ಗ್ರಂಥಪಾಲಕರು ಒಂದು ಹುದ್ದೆ
4) ದೈಹಿಕ ಶಿಕ್ಷಣ ಬೋದಕರ ಒಂದು ಹುದ್ದೆ